# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ:970/2013

| | | | |
|---|---|---|---|
| **ಚಾಸಾ :** | **8** | **ಪ್ರಾಸಾ:-** | **8** |

| | |
|---|---|
| ಹೆಸರು | ಕೃಷ್ಣಕುಮಾರ್ ಸಿ |
| ತಂದೆಯ ಹೆಸರು | ಚನ್ನಪ್ಪ |
| ವಯಸ್ಸು | 48 |
| ಉದ್ಯೋಗ | ಪಿಐ, ಬನ್ನೇರುಘಟ್ಟ, ಬೆಂಗಳೂರು |
| ವಿಳಾಸ | ಬನ್ನೇರುಘಟ್ಟ ಬೆಂಗಳೂರು |

- - - - - - - - - - - - - - - - - - - - - - - - - - - - -

**ದಿ:08.11.2023ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-</u>**

ದಿನಾಂಕ.19.07.2010 ರಿಂದ 06.09.2012 ರ ವರೆಗೆ ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.10.05.2012 ರಂದು ಸಂಜೆ 4:30 ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣೆಯ ಹೆಚ್.ಸಿ 185 ಕೃಷ್ಣಮೂರ್ತಿ ರವರು ಸರಹದ್ದಿನ ಆಧಾರದ ಮೇಲೆ ಹಾರೋಹಳ್ಳಿ ಠಾಣಾ ಗುನ್ನ ನಂಬರ್ 106/2012 ರ ಪ್ರ.ವ.ವರದಿ, ದೂರು, ವರದಿ ಮತ್ತು ದಾಖಲೆಗಳನ್ನು ನನಗೆ ಹಾಜರುಪಡಿಸಿದ್ದು, ಸದರಿ ಪ್ರಕರಣವನ್ನು ಸರಹದ್ದಿನ ಆಧಾರದ ಮೇಲೆ ನಮ್ಮ ಠಾಣಾ ಗುನ್ನ ನಂ.96/2012 ರಲ್ಲಿ ದಿ.10.05.2012 ರಂದು ಪ್ರ.ವ.ವರದಿ ಯನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ಠಾಣಾ ಗುನ್ನ ನಂ.96/2012 ರ ಪ್ರ.ವ.ವರದಿಯನ್ನು ನಿಪಿ-11, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ದಿ.11.05.2012 ರಂದು ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಚಾಸಾ-2, 3, 5 ಮತ್ತು 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ.06.6.2012 ರಂದು 1 ರಿಂದ 7 ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಸದರಿ ಆರೋಪಿತರು ಜಾಮೀನು ಪಡೆದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. 1 ನೇ ಆರೋಪಿಯ ಸ್ವಇಚ್ಛ ಹೇಳಿಕೆಯನ್ನು ದಿ.6.6.2012 ರಂದು ಪಡೆದಿರುತ್ತೇನೆ.

ದಿನಾಂಕ.05.05.2012 ರಂದು ಉಪನೋಂದಣಾಧಿಕಾರಿಗಳು ಕನಕಪುರ ಕಚೇರಿಯಿಂದ ಸರ್ವೆ ನಂ.91/1 ರ 1 ಎಕರೆ ಜಮೀನಿಗೆ ಸಂಬಂಧಿಸಿದ ನೋಂದಾಯಿತ ದಸ್ತವೇಜಿ ದೃಢೀಕೃತ ನಕಲನ್ನು ಹಾರೋಹಳ್ಳಿ ಪೊಲೀಸರು ಪಡೆದು ನೀಡಿದ ಕ್ರಯಪತ್ರವನ್ನು ನಿಪಿ-12 ಎಂದು ಗುರುತಿಸಲಾಯಿತು.

ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷ್ಯ ಲಭ್ಯವಾಗಿದ್ದರಿಂದ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

## ಪಾಟೀ ಸವಾಲು ಶ್ರೀ ಕೆಎನ್‌ಎಂ ಆರೋಪಿ ಪರ ವಕೀಲರಿಂದಃ-

ಆರೋಪಿತರ ಮತ್ತು ದೂರುದಾರರ ನಡುವೆ ಜಮೀನಿನ ವಿಷಯವಾಗಿ 1 ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವುದು ತನಿಖಾವಧಿಯಲ್ಲಿ ನನಗೆ ತಿಳಿದುಬಂದಿರುವುದಿಲ್ಲ. ಪಿರ್ಯಾದಿಯು ಜಮೀನಿನ ಸರ್ವೆ ನಂಬರ್, ಕ್ಷೇತ್ರ

ಮತ್ತು ಕ್ಷೇತ್ರದ ಕುರಿತು ನೇರವಾಗಿ ನನಗೆ ಹೇಳಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ದೂರಿನಲ್ಲಿ ನಮೂದಿಸಿರುತ್ತಾರೆಂದು ನುಡಿಯುತ್ತಾರೆ. ತನಿಖೆಯ ಅವಧಿಯಲ್ಲಿ ಸದರಿ ಸರ್ವೆ ನಂಬರ್ ಜಮೀನಿಗೆ ನಾನು ಹೋಗಿರುವುದಿಲ್ಲ.

ನಾನು ಉಪನೋಂದಣಾಧಿಕಾರಿಗಳ ಕಚೇರಿಗೆ ಖುದ್ದು ಹೋಗಿ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಪ್ರಕರಣಕ್ಕೆ ಅನುಕೂಲವಾಗಲು ಚಾಸಾ-2, 3, 5 ಮತ್ತು 6 ರವರ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ತನಿಖಾವಧಿಯಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದು ತಿಳಿದುಬಂದಿದ್ದರೂ ಆರೋಪಿತರ ವಿರುದ್ದ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ದಿನಾಂಕ.11.05.2012 ರಂದು ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿಸಂಖ್ಯೆಗಳಿಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**